ಶ್ರೀ ರವೀಶ್ ಸಿ. ಜಿಗಜಿಣಗಿ.—ಸಾರ್ವಜನಿಕರಿಂದ ವಂತಿಕೆಯನ್ನು ಕೇಳಲು ನಮ್ಮ ಅಧಿಕಾರಿಗಳು ಪ್ರಯತ್ನ ಮಾಡಿಲ್ಲವೆಂದು ಹೇಳಿದ್ದಾರೆ. ಪುನಃ ನಾಳೆ ನಾನು ಅಧಿಕಾರಿಗಳಿಗೆ ಹೇಳಿ ಪತ್ರ ಬರೆಯುತ್ತೇನೆ.

ರಾಜ್ಯದಲ್ಲಿ ಪ್ರತಿಮೆಗಳ ಅನಾವರಣ ಮಾಡುವಾಗ ಅನುಸರಿಸಬೇಕಾದ ನಿಯಮಗಳು

೨೦೮೯. ಶ್ರೀ ಬಿ. ಲಕ್ಕಪ್ಪ, (ಚಿಕ್ಕನಾಯಕನಹಳ್ಳಿ).—ಮಾನ್ಯ ನಗರಾಭಿವೃದ್ಧಿಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರತಿಮೆಗಳನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಅನುಸರಿಸುತ್ತಿರುವ ನಿಯಮಗಳಾವುವು ?

ಆ) ಇತ್ತೀಚೆಗೆ ಬೆಂಗಳೂರು ನಗರಪಾಲಿಕೆಯವರು, ಬೆಂಗಳೂರು ನಗರದಲ್ಲಿ ಕಾಮರಾಜ್ ನಾಡಾರ್‌ರವರ ಪ್ರತಿಮೆಯನ್ನು ಅನಾವರಣಗೊಳಿಸಲು ಉದ್ದೇಶಿಸಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಇ) ಸದರಿ ಪ್ರತಿಮೆಯ ಅನಾವರಣದ ವಿಷಯದ್ದಾ ಸಾರ್ವಜನಿಕರಿಂದ ಹಾಗೂ ಸಾಹಿತ್ಯ ಮತ್ತು ಕಲಾವಿದರಿಂದ ಪ್ರತಿಭಟನೆಯೇನಾದರೂ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಸದರಿ ಪ್ರತಿಮೆಯ ಅನಾವರಣವನ್ನು ಕೈಬಿಡುವಂತೆ ಬೆಂಗಳೂರು ನಗರಸಭೆಗೆ ಸರ್ಕಾರವು ಸೂಚಿಸಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಪ್ರತಿಮೆಗಳನ್ನು ಅನಾವರಣ ಮಾಡುವುದಕ್ಕೆ ಸಂಬಂಧಿತವಾಗಿ ಯಾರ ಪ್ರತಿಮೆ ಎಂಬುದನ್ನು ತಿಳಿದು, ಅವರ ಸಂಬಂಧಿಕರುಗಳ ಒಪ್ಪಿಗೆ ಪಡೆದು ಅವರ ಭಾವ ಚಿತ್ರಗಳಿಗನುಸಾರವಾಗಿ ಶಿಲ್ಪಿಗಳಿಂದ ರಚಿಸಿ, ಸೂಕ್ತ ಸ್ಥಳವನ್ನು ಗುರುತಿಸಿ, ರಾಜ್ಯ ಅಥವಾ ರಾಷ್ಟ್ರದ ಮಂತ್ರಿಮಂಡಲಗಳ ಅಧ್ಯಕ್ಷತೆಯಲ್ಲಿ ಅನಾವರಣ ಮಾಡುವ ಪದ್ಧತಿ ರೂಢಿಯಲ್ಲಿದೆ.

ಆ) ಕಾಮರಾಜನಾಡರ್ ಪಾಡಾರ್‌ರವರ ಪ್ರತಿಮೆಯ ಅನಾವರಣ ಸಮಿತಿಯು ಉದ್ದೇಶಿಸಿದ ಸ್ಥಳವು ಸೂಕ್ತವಲ್ಲದ ಕಾರಣ ನಗರ ಪಾಲಿಕೆಯು ಅನುಮತಿ ನೀಡಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿಭಟನೆ ಬಂದಿದೆ.

ಈ) ಪ್ರತಿಭಟನೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಬೆಂಗಳೂರಿನಲ್ಲಿ ಚಕ್ರವರ್ತಿ ಶಿವಾಜಿ ಕಾಮರಾಜ್‌ನಾಡರ್ ಮೊದಲಾದವರ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದಾದಾಗ ಇಲ್ಲಿ ಕನ್ನಡ ಕಲಾವಿದರು, ಸಾಹಿತಿಗಳು ಮತ್ತು ಕನ್ನಡಾಭಿಮಾನಿಗಳು ಅದನ್ನು ಪ್ರಬಲವಾಗಿ ವಿರೋಧಿಸಿದ್ದರು ಈ ಬಗ್ಗೆ ಸರ್ಕಾರದ ನಿಲುವು ಏನು ಮತ್ತೆ ನಗರದಲ್ಲಿ ಪ್ರತಿಮೆಗಳನ್ನು ಸ್ಥಾಪಿಸತಕ್ಕಂಥ ಕಾಲದಲ್ಲಿ ನಗರಪಾಲಿಕೆಯವರು ಅನುಸರಿಸತಕ್ಕಂಥ ನಿಯಮಗಳು ಏನು ? ಪ್ರತಿಮೆಗಳನ್ನು ಆಯ್ಕೆಮಾಡುವಾಗ ಕರ್ನಾಟಕದಲ್ಲಿ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸಿ ಹೆಸರಾದಂಥ ಕಲಾವಿದರು ಕನ್ನಡ ಬರಹಗಾರರು ಸಮಾಜ ಸುಧಾರಕರು ಇದ್ದರೆ ಅವರ ಪ್ರತಿಮೆಗಳನ್ನು ಸ್ಥಾಪನೆ ಮಾಡತಕ್ಕಂಥ ವಿಚಾರದಲ್ಲಿ ನಗರ ಪಾಲಿಕೆಯವರಾಗಲಿ, ಸರ್ಕಾರದವರಾಗಲಿ ವಿಚಾರ ಮಾಡಿರುತ್ತಾರೆಯೇ ಎಂದು ಕೇಳುತ್ತೇನೆ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಕಾಮರಾಜನಾಡರ್‌ರವರು ರಾಷ್ಟ್ರೀಯ ಮಹಾನಾಯಕರು, ಸ್ವಾತಂತ್ರ್ಯ ಹೋರಾಟಗಾರರು ಅವರು ಯಾವುದೇ ಒಂದು ಪಕ್ಷಕ್ಕೆ ಒಂದು ಪ್ರದೇಶಕ್ಕೆ ಸೀಮಿತರಾದ ವ್ಯಕ್ತಿಯಲ್ಲ. ಅವರನ್ನು ಸಂಕುಚಿತವಾಗಿ ಕಾಣುವುದು ಸರಿಯಲ್ಲವೆಂದು ನನ್ನ ಭಾವನೆ ಕಾಮರಾಜನಾಡರ್‌ರವರ ಪ್ರತಿಮೆಯ ಅನಾವರಣ ಸಮಿತಿಯವರು ಸೂಚಿಸಿರುವ ಸ್ಥಳವು ಸೂಕ್ತವಲ್ಲದ ಕಾರಣ ನಗರ ಪಾಲಿಕೆಯವರು ಒಪ್ಪಿಕೊಂಡಿಲ್ಲ ಆದಕ್ಕಾಗಿ ಪ್ರತಿಭಟನೆಯ ಸೂಚನೆ ಮಾಡಿದ್ದಾರೆ. ಮತ್ತೆ ಅದನ್ನು ಪರಿಶೀಲನೆ ಮಾಡಿ ಸರಿಯಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ನಗರಪಾಲಿಕೆಯ ಅಧಿಕಾರವಿರುತ್ತದೆ. ಅದಕ್ಕೆ ನಾವು ಯಾವುದೇ ಸೂಚನೆಯನ್ನೂ ಕೊಡತಕ್ಕಂಥ ಅಗತ್ಯವಿಲ್ಲ ಮತ್ತೆ ಪ್ರತಿಮೆಗಳನ್ನು ಸ್ಥಾಪನೆ ಮಾಡಲು ಯಾವರೀತಿ ನಿಯಮಗಳನ್ನು ಅನುಸರಿಸುತ್ತಾರೆ ಎನ್ನುವ ವಿಚಾರವನ್ನು ಕೇಳಿದ್ದಾರೆ. ಬೆಂಗಳೂರು ನಗರದಲ್ಲಿ ಅನೇಕ ರಸ್ತೆಗಳು ಇವೆ ಈ ರಸ್ತೆಗಳಿಗೆ ಕನ್ನಡ ನಾಡನ್ನು ಆಳಿದಂಥ ಮಹಾನ್ ವ್ಯಕ್ತಿಗಳ ಹೆಸರುಗಳನ್ನು, ಸಾಹಿತಿಗಳ ಹೆಸರುಗಳನ್ನು ಇಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಹಿಂದೆ ೧೦ ವರ್ಷಗಳಿಂದ ಇದ್ದಂಥ ರಸ್ತೆಗಳ ಹೆಸರುಗಳನ್ನೂ ಕೂಡ ಬದಲಾವಣೆ ಮಾಡಲಾಗಿದೆ ಅದನ್ನು ಪರಿಗಣನೆಗೆ ತೆಗೆದುಕೊಂಡು ಕನ್ನಡದ ಬಗ್ಗೆ ಕನ್ನಡ ಅಭಿಮಾನದ ಬಗ್ಗೆ ಅದೂ ದುರಭಿಮಾನವಾಗದ ರೀತಿಯಲ್ಲಿ ಪರಿಶೀಲನೆಮಾಡಿ ಕ್ರಮಂ ತೆಗೆದುಕೊಳ್ಳಲಾಗುತ್ತದೆಂದೂ ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಕಾಮರಾಜ್‌ನಾಡರ್‌ರವರ ಪ್ರತಿಮೆಯೆನ್ನು ಅನಾವರಣ ಮಾಡುವುದು ತಪ್ಪು ಎಂದೂ ಹೇಳುವುದಿಲ್ಲ.ಆದರೆ ಕನ್ನಡನಾಡಿನಲ್ಲಿ ಸಾಕಷ್ಟು ಕಲಾಭಿಮಾನಿಗಳು ಸಮಾಜ ಸುಧಾರಕರೂ ಇದ್ದಾರೆ. ಆ ಬಗ್ಗೆ ನಗರ ಪಾಲಿಕೆಯವರಿಗೆ ಆಸಕ್ತಿ ಇಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಕಾಮರಾಜನಾಡರ್ ಬಗ್ಗೆ ಯಾವುದೋ ಒಂದು ಸಂಸ್ಥೆ ಬಂದು ಕೇಳಿದ್ದಾರೆ ಬೇರೆಯವರು ಯಾರೂ ಕೇಳಿಲ್ಲ. ಕೇಳಿದರೆ ಪರಿಶೀಲನೆ ಮಾಡುತ್ತೇವೆ.

ಬೆಳಗಾಂ ಜಿಲ್ಲಾ ಪರಿಷತ್ ಪ್ರದೇಶದಲ್ಲಿ ಎನ್.ಆರ್.ಇ.ಪಿ ಕಾಮಗಾರಿಗಳು

೨೨೫೨. ಶ್ರೀ ಪುಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಪಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೬-೫-೮೮ ರಂದು ಜಿಲ್ಲಾ ಪರಿಷತ್ ಬೆಳಗಾಂ ಸಭೆಯ ವಿಶಯ ನಂ. ೪ರಲ್ಲಿ ಎನ್.ಆರ್.ಇ.ಪಿ. ಶೀರ್ಷಿಕೆಯಲ್ಲಿ ಮಂಜೂರಾಗಿರುವ ಹಣದ ಮೊತ್ತವೆಷ್ಟ ಹಾಗೂ ಕೆಲಸದ ಹೆಸರುಗಳೇನು.

ಆ) ಎನ್.ಆರ್.ಇ.ಪಿ ಕೆಲಸಕ್ಕೆ ಇಟ್ಟಿರುವ ಕೂಲಿಗಾಗಿ ಕಾಳು ಕಾರ್ಯಕ್ರಮದಲ್ಲಿ ನಿರ್ದಿಷ್ಟ ಪಡಿಸಿರುವ ಕೂಲಿಎಷ್ಟು ಹಾಗೂ ಸಾಮಾಗ್ರಿಯೆಷ್ಟು (ವಿವರಣೆ ನೀಡುವುದು).

ಇ) ವಿಶೇಷ ಸಂದರ್ಭದಲ್ಲಿ ಇದನ್ನು ಮಂಜೂರು ಮಾಡುವುದು ಕಾನೂನಿನ ಉಲ್ಲಂಘನೆ,ಆದನ್ನು ಸರಕಾರ ತಡೆ ಹಿಡಿಯುವುದಕ್ಕೆ ಏನು ಕ್ರಮ ಕೈಗೊಂಡಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್‌ಮತ್ತು ವಕ್ಫ್ ಮಂತ್ರಿಗಳು).—

ಅ) ಮೊತ್ತ ರೂ. ೨,೮೭,೯೫೫—

ಕೆಲಸದ ಹೆಸರುಗಳು ಈ ಕೆಳಕಂಡಂತಿವೆ.

೧) ರಾಮದುರ್ಗ ತಾಲ್ಲೂಕು ಹೊಸಕೋಟಿ ಗ್ರಾಮದಲ್ಲಿ ಸಾರ್ವಜನಿಕ ರಸ್ತೆಗೆ ಫರಸಿ ಹಾಕುವುದು.

೨) ರಾಮದುರ್ಗ ತಾಲ್ಲೂಕು ಕವಂಕೇರಿ ಗ್ರಾಮದಲ್ಲಿ ಹರಿಜನಕೇರಿಯ ರಸ್ತೆಗೆ ಫರಸಿ ಹಾಕುವುದು

೩) ರಾಯಬಾಗ ತಾಲ್ಲೂಕು ಬ್ಯಾಕೂಡ ಗ್ರಾಮದಲ್ಲಿ (೦ ದಿಂದ ೬೦೦) ರಸ್ತೆಗೆ ೨೦ ಮಿ.ಮೀ. ಅಸ್ಫಾಲ್ಟ ಹಾಕುವುದು.

೪) ರಾಯಬಾಗ ತಾಲ್ಲೂಕು ಕನಕಣವಾಡಿ ಗ್ರಾಮದಲ್ಲಿ (೦ ದಿಂದ ೭೦೦) ರಸ್ತೆಗೆ ೨೦ ಮಿ.ಮಿ. ಅಸ್ಫಾಲ್ಟ ಹಾಕುವುದು.

೫) ರಾಯಬಾಗ ತಾಲ್ಲೂಕು ಕಂಕಣವಾಡಿ ಗ್ರಾಮದಲ್ಲಿ (೦ ದಿಂದ ೭೦೦ ಮಿ.) ರಸ್ತೆಗೆ ೨೦ ಮಿ.ಮೀ. ಅಸ್ಫಾಲ್ಟ ಹಾಕುವುದು,

ಆ) ಕೂಲಿ ಹಾಗೂ ಸಾಮಗ್ರಿಗಳ ಪ್ರಮಾಣ ೫೦ ೫೦ (ಈ ಪ್ರಮಾಣವು ಪ್ರತಿಯೊಂದು ಕೆಲಸಕ್ಕೆ ಇರದೆ ಜಿಲ್ಲೆಯಲ್ಲಿ ಕೈಗೊಳ್ಳುವ ಎಲ್ಲ ಕೆಲಸಗಳ ಮೊತ್ತಕ್ಕೆ ಇರುತ್ತದೆ).